ಶ್ರೀ ಗೋವಿಂದ ಎಂ. ಕಾರಜೋಳ: ಮಾನ್ಯ ಅಧ್ಯಕ್ಷರೆ, ಪೂರ್ಣ ಮಾಹಿತಿಯನ್ನು ಕೊಟ್ಟಿದ್ದೇವೆ. 237 ಕೆರೆಗಳ ನಿರ್ಮಾಣಕ್ಕೆ 7779.34 ಎಕರೆ ತೆಗೆದುಕೊಂಡಿದ್ದೇವೆಂದು ಹೇಳಿದ್ದೇವೆ. 68,60,61,000 ರೂಪಾಯಿಗಳಷ್ಟು ಪರಿಹಾರವನ್ನು ಕೊಟ್ಟಿದ್ದೇವೆ. ತಾವು ಕೇಳುವಂತದ್ದು ಕಟ್ಟಡ ಯಾವುದಾದರೂ ಮುಳುಗಿದ್ದರೆ ಎಂದು. ಅಂತವರದ್ದು ನನ್ನ ಗಮನಕ್ಕೆ ತಂದರೆ ನಿರ್ದಿಷ್ಟ ಪ್ರಕರಣವೇನಾದರೂ ಇದ್ದರೆ ಖಂಡಿತ ಮಾಡುತ್ತೇನೆ.

ಅಧ್ಯಕ್ಷರು: ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಮಂಡಿಸುವುದು ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಸ್. ಸುರೇಶ್ ಕುಮಾರ್ (ಮಾನ್ಯ ಕಾನೂನು ಮತ್ತು ನಗರಾಭಿವೃದ್ಧಿ ಸಚಿವರು):- ದಿನಾಂಕ 12-12-2011ರ 5ನೇ ಪಟ್ಟಿಯಿಂದ ಲಿಖಿತ ಮೂಲಕ ಉತ್ತರಿಸುವ 96 ಪ್ರಶ್ನೆಗಳ ಪೈಕಿ 87 ಪ್ರಶ್ನೆಗಳ ಉತ್ತರಗಳನ್ನು ಸದನದಲ್ಲಿ ಮಂಡಿಸುತ್ತಿದ್ದೇನೆ.

ಅಧ್ಯಕ್ಷರು: ಮಂಡಿಸಲಾಗಿದೆ (ಅನುಬಂಧ-1)

3. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯಗಳು:

ಅಧ್ಯಕ್ಷರು: ಈಗ ಶೂನ್ಯವೇಳೆ, ಶ್ರೀ ಶಂಕರಲಿಂಗೇಗೌಡರು ಹಾಗೂ ಶ್ರೀ ರೇವಣ್ಣನವರು ಇಬ್ಬರದೂ ಒಂದೇ ಪ್ರಶ್ನೆ.

ಅ) ವಿಷಯ: ಮೈಸೂರು ಜಿಲ್ಲೆಯಲ್ಲಿ ನಡೆಯುತ್ತಿರುವ ಮರಳಿನ ಮಾರಣಹೋಮ ಹಾಗೂ ಕಾರ್ಮಿಕರ ಸಮಸ್ಯೆ ಬಗ್ಗೆ.

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ಸಭಾಧ್ಯಕ್ಷರೇ, ನಾನು . . .

ಶ್ರೀ ಹೆಚ್. ಡಿ. ರೇವಣ್ಣ: ಅಧ್ಯಕ್ಷರೇ, ನಾವು ಒಂದು ಮನವಿಯನ್ನು ತಂದಿದ್ದೇವೆ. ದಯಮಾಡಿ ಆಮೇಲೆ ಅವಕಾಶ ಮಾಡಕೊಡಿ.

ಅಧ್ಯಕ್ಷರು: ಆಯಿತು

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ಮಾನ್ಯ ಅಧ್ಯಕ್ಷರೇ, ನಮ್ಮ ಮೈಸೂರು ಜಿಲ್ಲೆಯಲ್ಲಿ ಮರಳಿಗೆ ಮಾರಣಹೋಮವಾಗುತ್ತಿದೆ. ನಮ್ಮನ್ನು ಮೂರು ಸರ್ಕಾರ ಸೇರಿ JCB ಎಂದು ಕರೆಯುತ್ತಾರೆ. JCB ಎಂದರೆ ಏನಪ್ಪಾ ಎಂದರೆ, J ಎಂದರೆ ಜನತಾದಳ, C ಎಂದರೆ ಕಾಂಗ್ರೆಸ್, B ಎಂದರೆ ಬಿಜೆಪಿ ಇವೆಲ್ಲವನ್ನೂ ಸೇರಿಸುತ್ತಿದ್ದೇವೆ ಎಂದು ಬಯ್ದರು. ಇವತ್ತು ಕೂಲಿ ಕಾರ್ಮಿಕರ ಮೇಲೆ ತಣ್ಣೀರು ಬಟ್ಟೆ ಹಾಕುವಂತ ಕೆಲಸವಾಗುತ್ತಿದೆ. ಮೂರು ತಿಂಗಳುಗಳಿಗೂ ಹೆಚ್ಚು ಕಾಲ ಮರಳು ಸರಬರಾಜು ಅಗುತ್ತಿಲ್ಲ. ಜೊತೆಗೆ ಲಾರಿ

ಮಾಲೀಕರು ಅವರಿಗೆ ಮಾರಿಯಾಗಿದೆ ಮತ್ತು ಕಟ್ಟಡ ಕಟ್ಟಲಿಕ್ಕೆ ಸಾಲ ತೆಗೆದುಕೊಂಡವರು ಬಡ್ಡಿ ಕಟ್ಟಲಿಕ್ಕೆ ಆಗುತ್ತಿಲ್ಲ. ಮಾನ್ಯ ಸಿದ್ಧರಾಮಯ್ಯನವರಿಗೆ ಸಿದ್ಧಿ ಬುದ್ಧಿ ಎರಡೂ ಇದೆ. ಏತಕ್ಕೆ ಹೀಗೆ ವಿಚಲಿತರಾಗಿದ್ದಾರೋ ಗೊತ್ತಿಲ್ಲ. ನಮ್ಮ ರೇವಣ್ಣನವರು ಪ್ರಧಾನ ಮಂತ್ರಿಯವರ ಮಗ ಏತಕ್ಕೆ ರೇಗುತ್ತಿಲ್ಲವೋ ಗೊತ್ತಿಲ್ಲ. ನೀವಿಬ್ಬರೂ ಸೇರಿ ಮೈಸೂರು ಜಿಲ್ಲೆಯನ್ನು ಹಾಳು ಮಾಡುತ್ತಿದ್ದೀರಿ ಎಂದರೆ ತಪ್ಪಾಗಲಾರದು.

ಶ್ರೀ ಸಿದ್ಧರಾಮಯ್ಯ: ನಾವಲ್ಲ, ನಿಮ್ಮ ಸರ್ಕಾರ ಹಾಳು ಮಾಡುತ್ತಿದೆ. ಬಿಜೆಪಿ ಸರ್ಕಾರ ಹಾಳು ಮಾಡುತ್ತಿರುವುದು, ನಾವಲ್ಲ

ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡ: ನೀವು ಕೇಳಿ, ನೀವೇಕೆ ಮೂಕ ಪ್ರೇಕ್ಷಕರಾಗಿದ್ದೀರಿ? ಒಂದು ವಚನ ಹೇಳುತ್ತೇನೆ. "ಹೆಡ್ಡಂಗೆ ಹಿರಿತನವು, ಮೂಡಂಗೆ ಗುರುತನವು, ಊರಿನ ಜಮಾನ ಯಮರಾಜನಾಗಲು, ಯಮಕಿಂಕರರು ಬಂದರೂ ಕೇಳಯ್ಯ ಶಂಭುಲಿಂಗೇಶ್ವರ" ಎಂಬ ವಚನವಿದೆ. ಇದನ್ನು ನಾನೇ ಬರೆದಿರುವುದು, ಹಾಗೆ ಎಲ್ಲಾ ಕೆಟ್ಟದಾಗಿ ಕುಳಿತಿದೆ. ಇದನ್ನು ಸರಿಪಡಿಸದೆ ಹೋದರೆ ನಾನು ಆಡಳಿತ ಪಕ್ಷದಲ್ಲಿದ್ದರೂ ಕತ್ತಿಗೆ ಬಿಗಿದುಕೊಳ್ಳಬೇಕಾಗುತ್ತದೆ. ನಾನು ಬಾವಿಯಲ್ಲಿ ಧರಣಿಗೆ ಕೂರುತ್ತೇನೆ.

(ಈ ಹಂತದಲ್ಲಿ ಆಡಳಿತ ಪಕ್ಷದ ಮಾನ್ಯ ಸದಸ್ಯರಾದ ಶ್ರೀ ಹೆಚ್. ಎಸ್. ಶಂಕರಲಿಂಗೇಗೌಡರು ಧರಣಿ ಮಾಡಲು ಸದನದ ಬಾವಿಯೊಳಗೆ ಆಗಮಿಸಿದರು)

ಶ್ರೀ ಸಿದ್ಧರಾಮಯ್ಯ: ಮಾನ್ಯ ಶಂಕರಲಿಂಗೇಗೌಡರೇ, ಒಂದು ನಿಮಿಷ ಕುಳಿತುಕೊಳ್ಳಿ. ಆಯಿತು. ನಮಗೇನಂತೆ, ruling party ಯವರು ಕುಳುತುಕೊಳ್ಳಲಿ ಬಿಡಿ.

(ಗೊಂದಲ)

ಅಧ್ಯಕ್ಷರು: ಉತ್ತರ ಕೇಳಿ, ಈಗ ಉತ್ತರ ಹೇಳುವುದಕ್ಕೆ ಅವಕಾಶ ಕೊಡಿ.

(ಗೊಂದಲ)

ಶ್ರೀ ಯು. ಟಿ. ಖಾದರ್: ಎಲ್ಲಾ ಜಿಲ್ಲೆಯಲ್ಲಿ, ಇಡೀ ರಾಜ್ಯದಲ್ಲೆಲ್ಲಾ ಮರಳಿನ ಸಮಸ್ಯೆಯಾಗಿದೆ.

(ಗೊಂದಲ)

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ: ಮಾನ್ಯ ಸಿದ್ಧರಾಮಯ್ಯನವರು, ಮಾನ್ಯ ರೇವಣ್ಣನವರು ಎಲ್ಲಾ . . .

(ಗೊಂದಲ)

ಶ್ರೀ ಸಿದ್ದರಾಮಯ್ಯ: ಕುಳಿತುಕೊಳ್ಳಿ, ಆ ಕಡೆ ಕೋಪ ಮಾಡುವುದನ್ನು ಬಿಟ್ಟು ನನ್ನ ಕಡೆ ಏಕೆ ಮಾಡುತ್ತಿದ್ದೀಯಾ? ಅಲ್ಲಿ ಮಾಡು ಅಲ್ಲಿ. ಮಾನ್ಯ ಅಧ್ಯಕ್ಷರೆ, ಪಾಪ ಮಾನ್ಯ ಶಂಕರಲಿಂಗೇಗೌಡರಿಗೆ . . . ಬನ್ರಿ ಇಲ್ಲಿಗೆ.

(ಗೊಂದಲ)

ಅಧ್ಯಕ್ಷರು: ಶ್ರೀ ಎಚ್. ಎಸ್. ಶಂಕರಲಿಂಗೇಗೌಡರೇ: please ಕುಳಿತುಕೊಳ್ಳಿ ತಾವು

ಶ್ರೀ ಸಿದ್ದರಾಮಯ್ಯ: ಇರಲಿ ಬಿಡಿ. ಪಾಪ ನನ್ನ ಪಕ್ಕದಲ್ಲಿಯೇ ನಿಂತಿರಲಿ. ನಮ್ಮೂರವರು. ನನಗೆ ಬಹಳ ಸ್ನೇಹಿತ.

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ: ರವರು ಸದನದ ಬಾವಿಯಲ್ಲಿ ನಿಂತು ಮಾತನಾಡಿದರು)

ಶ್ರೀ ಸಿದ್ದರಾಮಯ್ಯ: ಡ್ರಾಮ ಇಲ್ಲ.

(ಗೊಂದಲ)

ಅಧ್ಯಕ್ಷರು: Please ಹೋಗಿ

ಶ್ರೀ ಸಿದ್ದರಾಮಯ್ಯ: ನಾನು ಮಾತನಾಡಬೇಕು. ನಮ್ಮಲ್ಲಿ ಬಹಳ ಸಮಸ್ಯೆಯಿದೆ. ನನಗೆ ಅವರು ಬಹಳ ಆಪ್ತ ಸ್ನೇಹಿತ.

(ಈ ಹಂತದಲ್ಲಿ ಮಾನ್ಯ ಎಚ್. ಎಸ್. ಶಂಕರಲಿಂಗೇಗೌಡರು ಸದನದ ಬಾವಿಯಿಂದ ತಮ್ಮ ಸ್ಥಾನಕ್ಕೆ ತೆರಳಿದರು)

ಶ್ರೀ ಸಿದ್ದರಾಮಯ್ಯ: ಮಾನ್ಯ ಅಧ್ಯಕ್ಷರೆ, ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತಹ, ಅದೂ particularly ನನ್ನ ಕ್ಷೇತ್ರ ಹೆಚ್. ಸಿ. ಮಹದೇವಪ್ಪನವರ ಕ್ಷೇತ್ರದಲ್ಲಿ ವಿಶೇಷವಾಗಿ ಮರಳು ದಂಧೆ ನಡೆಯುತ್ತಿತ್ತು. ಅದು ಆದ ಮೇಲೆ ಇತ್ತೀಚೆಗೆ ಸರ್ಕಾರ ಒಂದು ನೀತಿ ಮಾಡಿದ್ದೇವೆ ಎಂದು ಹೇಳಿದ್ದಾರೆ. ಅಲ್ಲಿ ಮರಳನ್ನು ತೆಗೆಯುವುದು, ಲಾರಿಗಳಿಂದ ತೆಗೆದುಕೊಂಡು ಬರುವುದು, ಅದನ್ನು PWD ಇಲಾಖೆಯವರಿಗೆ ವಹಿಸಿದ್ದಾರೆ. ತಹಶೀಲ್ದಾರರಿಗೆ ವಹಿಸಿದ್ದಾರೆ. ಅಲ್ಲಿ ತಾತ್ಕಾಲಿಕವಾದಂತಹ ಲೀಸ್‌ಗೆ permit ಕೊಡುತ್ತಾರೆ. ಅವರು ತೆಗೆಯುವುದು ಮತ್ತೆ ಅಲ್ಲಿಂದ ಮಾರಾಟ ಮಾಡುವುದು ಇದನ್ನೆಲ್ಲಾ ಮಾಡುತ್ತಿದ್ದಾರೆ. ಇದರಿಂದ ಏನಾಗಿದೆ ಎಂದರೆ, ಅಲ್ಲಿ ಕೂಲಿ ಮಾಡುತ್ತಿರುವಂತಹ ಬಹಳ ಜನ ವಿಶೇಷವಾಗಿ ನಮ್ಮ ಕ್ಷೇತ್ರದವರು, ಟಿ. ನರಸೀಪುರ ಕ್ಷೇತ್ರದಲ್ಲಿಯೇ ಜಾಸ್ತಿ ಕೂಲಿ ಮಾಡುತ್ತಿದ್ದಾರೆ. ಅವರಿಗೆ ಬಹಳ

ತೊಂದರೆಯಾಗಿದೆ. ಲಾರಿ ಮಾಲೀಕರುಗಳಿಗೆ ತೊಂದರೆಯಾಗಿದೆ. ಮರಳು ತೆಗೆದುಕೊಳ್ಳುವಂತಹ ಗ್ರಾಹಕರಿಗೆ ಬಹಳ ದುಬಾರಿಯಾಗಿದೆ. ಅದಕ್ಕೆ ಇದರ ಬಗ್ಗೆ ಸರ್ಕಾರ ಒಂದು ಸ್ಪಷ್ಟವಾದಂತಹ ನಿಲುವನ್ನು ಮಾಡಬೇಕಾಗಿದೆ, ಸ್ಪಷ್ಟವಾದಂತಹ ನೀತಿ ಮಾಡಬೇಕಾಗುತ್ತದೆ. ಇವತ್ತಿನವರೆಗೆ ಮರಳಿನ ಬಗ್ಗೆ ಸ್ಪಷ್ಟವಾದಂತಹ ಒಂದು ನೀತಿ ಮಾಡಿಯೇ ಇಲ್ಲ. ನಾನು ಮೈಸೂರಿಗೆ ಹೋದ ತಕ್ಷಣ ಸುಮಾರು ಒಂದು ಸಾವಿರ–ಎರಡು ಸಾವಿರ ಜನ ನಮ್ಮ ಮನೆ ಮುಂದೆ ಬಂದು ನಿಂತುಕೊಳ್ಳುತ್ತಾರೆ. ಮುತ್ತಿಗೆ ಹಾಕುತ್ತಾರೆ. ನಮಗೆಲ್ಲಾ ಕೂಲಿ ಇಲ್ಲ. ನಮಗೆ ದಿನಕ್ಕೆ 300 ರೂಪಾಯಿಗಳ ಕೂಲಿ ಸಿಗುತ್ತಿತ್ತು. ಈಗ ಒಂದು ರೂಪಾಯಿಯು ಸಿಗುತ್ತಿಲ್ಲ. ಈ ತರಹ ಎಲ್ಲಾ ಇವೆ. ನಾವು ಈ ಹಿಂದೆ ಏನು ಮಾಡಿದ್ದೇವು ಎಂದರೆ ಮರಳನ್ನು ಹೆಚ್ಚು ಲೋಡ್ ಮಾಡಿಕೊಂಡು ಹೊಡೆಯುವವರನ್ನು ನಿಲ್ಲಿಸಿ ಎಂದು ಹೇಳಿದ್ದೆವು. ಅಕ್ರಮವಾಗಿ ಮಾಡುವುದನ್ನು ನಿಲ್ಲಿಸಿ ಎಂದು ಹೇಳಿದ್ದೆವು. ರೋಡ್ ಎಲ್ಲಾ ಹಾಳಾಗುತ್ತದೆ ಎಂದು ಹೇಳಿದ್ದೆವು. ಈಗ ಏನಾಗಿದೆ ಎಂದರೆ, ಯಾರೋ ಕೆಲವರಿಗೆ ಅನುಕೂಲವಾಗುವ ರೀತಿಯಲ್ಲಿ ಆಗಿಬಿಟ್ಟಿದೆ. ಅದಕ್ಕೋಸ್ಕರವಾಗಿ ಇದರ ಬಗ್ಗೆ ಕೂಲಂಕಷವಾಗಿ ಚರ್ಚೆಯಾಗಬೇಕು. ಇದು zero hour ಆಗಿರುವುದರಿಂದ ನಾನು ಹೆಚ್ಚಿಗೆ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಆಗಬೇಕಾಗುತ್ತದೆ. ಸರ್ಕಾರ ಇದರ ಬಗ್ಗೆ ಕಾಳಜಿ ವಹಿಸಬೇಕು. ಸರ್ಕಾರದ ನೀತಿಯೇನು ಏನು ಮಾಡಿದ್ದಾರೆ. ಅಲ್ಲಿ ಕಾರ್ಮಿಕರಿಗೆ ತೊಂದರೆಯಾಗುತ್ತಿದೆ. ಲಾರಿ ಮಾಲೀಕರಿಗೆ ತೊಂದರೆಯಾಗುತ್ತಿದೆ, ಮರಳು ಕೊಂಡುಕೊಳ್ಳೂವವರಿಗೆ ತೊಂದರೆಯಾಗುತ್ತಿದೆ ಈ ಬಗ್ಗೆ ಸಂಬಂಧಪಟ್ಟ ಮಂತ್ರಿಯವರು ಗಮನಹರಿಸಬೇಕು. ಇವತ್ತು ಬಡವರೆಲ್ಲ ಮನೆ ಕಟ್ಟಬೇಕು. ಅವರಿಗೂ ಮರಳು ಸಿಗುತ್ತಿಲ್ಲ.

ಅಧ್ಯಕ್ಷರು: 10 ಸಾವಿರ ರೂಪಾಯಿಗಳಾಗಿದೆ.

ಶ್ರೀ ಸಿದ್ದರಾಮಯ್ಯ: ಒಂದು ಲಾರಿ ಮರಳಿಗೆ 20 ಸಾವಿರ – 30 ಸಾವಿರ ಆಗುತ್ತಿದೆ. ಪಾಪ ಅವರಿಗೆ ನಾವು ಮನೆಗೆ ಕೊಡುವುದು 60 ಸಾವಿರ ರೂಪಾಯಿಗಳು. ಒಂದು ಲಾರಿ ಮರಳಿಗೆ . . .

ಶ್ರೀ ವೆಂಕಟರಾವ್ ನಾಡಗೌಡ: ರಸ್ತೆ ಕೆಲಸಗಳೆಲ್ಲಾ ನಿಂತಿವೆ. Government works ಕೂಡ ನಿಂತಿವೆ. ಸರ್ಕಾರದ ಕೆಲಸ ಕೂಡ ನಿಲ್ಲುತ್ತಿದೆ.

(ಗೊಂದಲ)

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ: ನೀವು ವಿರೋಧ ಪಕ್ಷದ ಶಾಸಕರಾಗಿ ಹೇಳಿದ್ದೀರಿ. ನಾನು ಆಡಳಿತ ಪಕ್ಷದ ಶಾಸಕನಾಗಿ ಹೇಳಿದ್ದೇನೆ. ಯಾವನೋ ಒಬ್ಬ ಯಜಮಾನ ಅವನು ಆಡಿದ್ದೇ ಆಟ, ಮಾಡಿದ್ದೇ ಪಾಠ. ಈ ರಾಜ್ಯದಲ್ಲಿ ಕೆಲಸ . . .

(ಗೊಂದಲ)

ಅಧ್ಯಕ್ಷರು: ಕುಳಿತುಕೊಳ್ಳಿ

ಶ್ರೀ ಸಿದ್ದರಾಮಯ್ಯ: ಈಗ ಪಾಪ ಶಂಕರಲಿಂಗೇಗೌಡರಿಗೆ ಆಕ್ರೋಶವೇನು ಎಂದರೆ, ಅಲ್ಲಿ ಪಾಪ ಗ್ರಾಹಕರಿಗೆ ಬಹಳ ತೊಂದರೆಯಾಗಿದೆ, ಕೂಲಿಕಾರ್ಮಿಕರಿಗೆ ತೊಂದರೆಯಾಗಿದೆ, ಲಾರಿ ಮಾಲೀಕರಿಗೆ ತೊಂದರೆಯಾಗಿದೆ. ಅವರು ಪ್ರತಿ ದಿನ ಮನೆ ಹತ್ತಿರ ಬಂದು ಗಲಾಟೆ ಮಾಡುತ್ತಿರುತ್ತಾರೆ. ಹೌದಲ್ಲವೇ?

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ: ಉಗೀತಾರೆ ಕ್ಯಾಕರಿಸಿ

ಶ್ರೀ ಸಿದ್ದರಾಮಯ್ಯ: ಕ್ಯಾಕರಿಸಿ ಉಗೀತಾರೆ, ಮಾನ್ಯ ಅಧ್ಯಕ್ಷರೆ, ಅವರನ್ನು ಪಾಪ ಇವರು ಮಂತ್ರಿಯನ್ನೂ ಮಾಡಲಿಲ್ಲ. ಅವರ ಸಮಸ್ಯೆ ಬಗೆಹರಿಸಿಕೊಡಬೇಕೋ ಬೇಡವೋ?

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ: ನಗುವುದಲ್ಲ ಇದು. ವಾಟಾಳ್ ನಾಗರಾಜ್ ರವರು ಈ ಸದನಕ್ಕೆ ಬೇಕಾಗಿತ್ತು.

(ಗೊಂದಲ)

ಶ್ರೀ ಸಿದ್ದರಾಮಯ್ಯ: ನಮ್ಮ ಎಂ.ಎಲ್.ಎ. ಗಳನ್ನಾದರೂ ಕೂಡ ಕರೆದು ಚರ್ಚೆ ಮಾಡಿ (ಗೊಂದಲ) ಈಗಲೂ ಕೂಡ ನಾನು ಸಲಹೆ ಮಾಡುತ್ತೇನೆ. ಆ ಭಾಗದ ಎಂ.ಎಲ್.ಎ. ಗಳನ್ನೆಲ್ಲಾ ಕರೆದು ಕುಳಿತುಕೊಂಡು ಚರ್ಚೆ ಮಾಡಿ ಏನು ಮಾಡಬೇಕು ಎಂಬುದನ್ನು ಮಾಡಿ. ಸರ್ಕಾರ ಸ್ಪಷ್ಟವಾದಂತಹ ನೀತಿಯನ್ನು ತಂದು, ಕಾರ್ಮಿಕರಿಗೆ ತೊಂದರೆಯಾಗದಂತಹ ರೀತಿಯಲ್ಲಿ, ಲಾರಿ ಮಾಲೀಕರಿಗೆ ತೊಂದರೆಯಾಗದ ರೀತಿಯಲ್ಲಿ, ಗ್ರಾಹಕರಿಗೆ ತೊಂದರೆಯಾಗದ ರೀತಿಯಲ್ಲಿ ಒಂದು ನೀತಿಯನ್ನು ಮಾಡಬೇಕು ಎಂದು ನಾನು ಕೂಡ ಶಂಕರಲಿಂಗೇಗೌಡರ ಪರವಾಗಿ ತೀವ್ರವಾಗಿ ಒತ್ತಾಯ ಮಾಡುತ್ತೇನೆ.

ಶ್ರೀ ಎಚ್. ಎಸ್. ಶಂಕರಲಿಂಗೇಗೌಡ: ಬರೀ ಒತ್ತಾಯ ಪ್ರಯೋಜನವಿಲ್ಲ. ಇವತ್ತೇ ಕಾರ್ಯರೂಪಕ್ಕೆ ತರಬೇಕು. ಮಾನ್ಯ ರೇವಣ್ಣನವರೇ ಅದನ್ನು ಹೇಳಿ.

(ಗೊಂದಲ)

ಅಧ್ಯಕ್ಷರು: ಉತ್ತರ ಹೇಳಿ. ಎಲ್ಲರದ್ದೂ ಒಂದೇ ಸಮಸ್ಯೆ

(ಗೊಂದಲ)

ಅಧ್ಯಕ್ಷರು: ಇದು ಇಡೀ ರಾಜ್ಯದ ಸಮಸ್ಯೆ. ಇದು ಅತ್ಯಂತ ಗಂಭೀರವಾದ ವಿಷಯ

(ಗೊಂದಲ)

ಶ್ರೀ ದೊಡ್ಡನಗೌಡ ಪಾಟೀಲ್: ಮಾನ್ಯ ಅಧ್ಯಕರೆ, ದಯವಿಟ್ಟು ಅವಕಾಶ ಕೊಡಬೇಕು

(ಗೊಂದಲ)

ಅಧ್ಯಕ್ಷರು: ಈಗ ರೇವಣ್ಣನವರನ್ನು ಕರೆದಿದ್ದೇನೆ. ಆಮೇಲೆ ಹೇಳಿ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಅಧ್ಯಕ್ಷರೆ, ಇವತ್ತು ಮರಳಿನ ವಿಷಯಕ್ಕೆ ಸಂಬಂಧಪಟ್ಟಂತೆ ಕೇವಲ ಮೈಸೂರು ಜಿಲ್ಲೆಯಲ್ಲಿ ಸಮಸ್ಯೆಯಿಲ್ಲ. ಇವತ್ತು ಇಡೀ ರಾಜ್ಯದಲ್ಲಿ ಮರಳಿನ ದಂಧೆ ನಡೆಯುತ್ತಿದೆ. ಒಂದು ಕಡೆ ಅದು ಸರ್ಕಾರಕ್ಕೂ ಲಾಸ್. ಕೆಲವು ಅಧಿಕಾರಿಗಳು ದುಡ್ಡು ತಿನ್ನುವುದಕ್ಕೆ ಈಗ ಒಂದು ಅವಕಾಶವಾಗಿದೆ. ಒಂದು ಲಾರಿ ಮರಳಿಗೆ ಕೆಲವು ಕಡೆ ತಹಶೀಲ್ದಾರರು ಒಂದು ಲಕ್ಷ ರೂಪಾಯಿಗಳ ದಂಡ ಹಾಕುತ್ತಿದ್ದಾರೆ. ಉದಾಹರಣೆಗೆ ಮಾಗಡಿಯಲ್ಲಿ ಒಂದು ಲಕ್ಷ ರೂಪಾಯಿಗಳು. ಯಾರು ಅವರಿಗೆ ದುಡ್ಡು ಕೊಡುತ್ತಾರೋ ಅವರಿಗೆ ಪುಕ್ಸಟ್ಟೆ ಬಿಡುತ್ತಾರೆ. ದುಡ್ಡು ಕೊಡದೇ ಹೋದರೆ ಒಂದು ಲಕ್ಷ ರೂಪಾಯಿಗಳ ದಂಡ ಹಾಕುತ್ತಾರೆ. ಮಾಗಡಿಯಲ್ಲಿ ಹಾಗೂ ಕುಣಿಗಲ್‌ನಲ್ಲಿ ಎಷ್ಟು ಕೇಸ್ ಹಾಕಿದ್ದಾರೆ ಎಂಬುದನ್ನು ದಯಮಾಡಿ ಬೇಕಾದರೆ ನೀವು ಚೆಕ್ ಮಾಡಿ. ಈ ರೀತಿ ರಾಜ್ಯದಲ್ಲಿ ಆಗುತ್ತಿದೆ. ಆಮೇಲೆ ಏನಾಗಿದೆ ಎಂದರೆ, ಒಂದು ಲೋಡ್ ಮರಳು ಇವತ್ತು ಗ್ರಾಹಕರಿಗೆ 40 ಸಾವಿರ ರೂಪಾಯಿಗಳು ಆಗಿದೆ. ಬೆಂಗಳೂರಿನಲ್ಲಿರಬಹುದು, ಕೆಲವು ಕಡೆ ತಾಲ್ಲೂಕು ಕೇಂದ್ರಗಳಲ್ಲಿ ಇವತ್ತು ಮರಳು ಸಿಗುತ್ತಿಲ್ಲ. ಈ ಸರ್ಕಾರ ಸುಮಾರು ಒಂದು ವರ್ಷದಿಂದ ಏನು ಮಾಡುತ್ತಿದೆ? PWD ಯಿಂದ ತಾವು ಏನೋ ಮಾಡುತ್ತೇವೆ ಎಂದು ಹೇಳಿದ್ದೀರಿ. ಹೊಳೆಯಿಂದ 40 ಕಿ.ಮೀ., 30 ಕಿ.ಮೀ. ಏನೋ ಮಾಡಿದ್ದೀರಿ. ಅಲ್ಲಿಂದ ತಂದು ಮತ್ತೆ ಮಾರುವಂತಹ ವ್ಯವಸ್ಥೆ ಏತಕ್ಕೆ ಬೇಕು? ಏನು ಮಾಡಿ ಎಂದರೆ ಆಯಾಯ ಜಿಲ್ಲೆಯ ಚುನಾಯಿತ ಪ್ರತಿನಿಧಿಗಳನ್ನು ಕರೆಸಿ, ಉಸ್ತುವಾರಿ ಸಚಿವರು ಇರಲಿ. ಉಸ್ತುವಾರಿ ಸಚಿವರನ್ನು ನಾನು ಹುಡುಕಿಕೊಂಡು ಹೋಗುವುದಕ್ಕೆ ಆಗುವುದಿಲ್ಲ. (ಗೊಂದಲ) ದಯಮಾಡಿ ಆಯಾಯ ಜಿಲ್ಲೆಯ ಜನ ಪ್ರತಿನಿಧಿಗಳನ್ನು ಗಮನದಲ್ಲಿಟ್ಟುಕೊಂಡು ಈ

ರೀತಿ ಲೋಕೋಪಯೋಗಿ ಇಲಾಖೆಯಿಂದ ಟೆಂಡರ್ ಕರೆಯುವುದರಿಂದ ಇನ್ನೂ ಹೆಚ್ಚಿಗೆ ದುಡ್ಡು ಹೊಡೆಯುವ ಅವಕಾಶವಾಗುತ್ತದೆ. ದಯಮಾಡಿ ಸರ್ಕಾರ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಸ್ಪಷ್ಟವಾಗಿ ಸೂಚನೆ ಕೊಡಬೇಕು. ಚುನಾಯಿತ ಪ್ರತಿನಿಧಿಗಳ ಜೊತೆ ಸೇರಿ ಅವರ ಮಾರ್ಗದರ್ಶನ ತೆಗೆದುಕೊಂಡು ಮಾಡಿದರೆ ಒಳ್ಳೆಯದು. 10 ಸಾವಿರ ರೂಪಾಯಿಯ ಮರಳು ಇವತ್ತು 40 ಸಾವಿರ ರೂಪಾಯಿಯಾಗಿದೆ. ಆದ್ದರಿಂದ ಸರ್ಕಾರ ಇದನ್ನು ಗಂಭೀರವಾಗಿ ಚಿಂತೆನೆ ಮಾಡಿ ಉತ್ತರ ಕೊಡಬೇಕು ಎಂದು ಮನವಿ ಮಾಡುತ್ತಿದ್ದೇನೆ. (ಗೊಂದಲ) ಮಾನ್ಯ ಅಧ್ಯಕ್ಷರೆ, ಇದು ಲೋಕೋಪಯೋಗಿ ಇಲಾಖೆ ಕಡೆಯಿಂದ ಆಗುವುದಿಲ್ಲ. ಅದರಿಂದ ದುಬಾರಿಯಾಗುತ್ತದೆ. ದಯಮಾಡಿ ಪರಿಹರ ಮಾಡಿ.

(ಗೊಂದಲ)

ಶ್ರೀ ಶಿವರಾಜ ತಂಗಡಗಿ: ಮಾನ್ಯ ಅಧ್ಯಕ್ಷರೆ, ಅಧಿಕಾರಿಗಳು ಸಿಕ್ಕಾಪಟ್ಟೆ ಭ್ರಷ್ಟಾಚಾರದಲ್ಲಿ ತೊಡಗಿದ್ದಾರೆ. ಇವತ್ತು ಮನೆ ಕಟ್ಟಿಸುವುದು ನಮಗೆ ಸಮಸ್ಯೆಯಾಗಿದೆ. ಅದರ ಜೊತೆಗೆ ಸರ್ಕಾರಿ ಕೆಲಸಗಳನ್ನು ಮಾಡುವುದಕ್ಕೂ ತೊಂದರೆಯಾಗಿದೆ. ಏಕೆಂದರೆ, ಪ್ರತಿಯೊಂದು ವಿಚಾರದಲ್ಲೂ development ಗೆ . . .

ಶ್ರೀ ಡಿ. ಕೆ. ಶಿವಕುಮಾರ್: ಈ issue officers ಗೆ ಅನುಕೂಲವಾಗುತ್ತಿದೆ

ಶ್ರೀ ಶಿವರಾಜ ತಂಗಡಗಿ: ಅಧಿಕಾರಿಗಳಿಗೆ ಇದರಿಂದ ಬಹಳಷ್ಟು ಅನುಕೂಲವಾಗುತ್ತಿದೆ. ಇದನ್ನು ದಯಮಾಡಿ ಮಾನ್ಯ ಲೋಕೋಪಯೋಗಿ ಸಚಿವರು immediate ಆಗಿ ಎಲ್ಲೆಲ್ಲಿ ಮರಲು ದಂಧೆ ಇದೆ ಅದನ್ನು ಸರಿ ಮಾಡುವಂತಹ ಕೆಲಸ ಮಾಡಬೇಕು. ಏಕೆಂದರೆ, ಬಹಳಷ್ಟು ತೊಂದರೆಯಾಗುತ್ತಿದೆ, ಸರ್ಕಾರಿ ಕೆಲಸವಿರಬಹುದು, ಇವತ್ತು ಮೆನೆ ಕಟ್ಟುಂತಹ ಕೆಲಸವಿರಬಹುದು, ಯಾವುದೇ ಕೆಲಸ ಕೂಡ ಆಗುತ್ತಿಲ್ಲ. ಮಾನ್ಯ ಅಧ್ಯಕ್ಷರೆ, ಲಾರಿಯನ್ನು, ಟ್ರಾಕ್ಟರ್ ಅನ್ನು ಹಿಡಿದು ಹಿಡಿದು ಒಳಗೆ ಹಾಕುತ್ತಿದ್ದಾರೆ.

(ಗೊಂದಲ)

ಶ್ರೀ ಸಿದ್ದರಾಮಯ್ಯ: ದಯವಿಟ್ಟು ಕುಳಿತುಕೊಳ್ಳಿ

(ಗೊಂದಲ)

ಅಧ್ಯಕ್ಷರು: ಒಂದು ನಿಮಿಷ ಕುಳಿತುಕೊಳ್ಳಿ please

(ಗೊಂದಲ)

ಶ್ರೀ ಸಿದ್ದರಾಮಯ್ಯ: ಮಾನ್ಯ ಮುಖ್ಯಮಂತ್ರಿಗಳು ಸದನದಲ್ಲಿಯೇ ಇದ್ದಾರೆ. ದಯಮಾಡಿ ಅವರು ಇವತ್ತು ಉತ್ತರ ಹೇಳಲಿ. ಇದು ಇಡೀ ರಾಜ್ಯಕ್ಕೆ ಸಂಬಂಧಪಟ್ಟಂತಹ ವಿಚಾರ. ಮೈಸೂರು ಜಿಲ್ಲೆ ಅಷ್ಟೆಯಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಿದ್ದರಾಮಣ್ಣನವರೇ, ಎಲ್ಲಾ Floor-leader ಗಳನ್ನು ಕರೆದು ಚರ್ಚೆ ಮಾಡಿ.

ಶ್ರೀ ಡಿ. ಕೆ. ಶಿವಕುಮಾರ್: ಬೇಕಾದಷ್ಟು ಜನ ಇದ್ದಾರೆ. Floor-leader ಅಷ್ಟೇ ಅಲ್ಲ

(ಗೊಂದಲ)

ಶ್ರೀ ಹೆಚ್. ಡಿ. ರೇವಣ್ಣ: ಅದಕ್ಕೆ ಸಂಬಂಧಪಟ್ಟಂತಹ ಎಲ್ಲರನ್ನೂ ಕರೆದು ಚರ್ಚೆ ಮಾಡಿ.

ಶ್ರೀ ಡಿ. ಕೆ. ಶಿವಕುಮಾರ್: ಎಲ್ಲರನ್ನು ಕರೆದು ಒಂದು ಮೀಟಿಂಗ್ ಮಾಡಲಿ. ಎಲ್ಲೆಲ್ಲಿ ಹೊಳೆ ಹೋಗುತ್ತದೆ. price rise . . .

(ಗೊಂದಲ)

ಅಧ್ಯಕ್ಷರು: ಎಲ್ಲಾ ಜಿಲ್ಲೆಗಳದ್ದು ಇದು. ಇಡೀ ರಾಜ್ಯದ್ದು ಎಂದು ಹೇಳಿದ್ದಾರಲ್ಲವೆ?

ಶ್ರೀ ಡಿ. ವಿ. ಸದಾನಂದಗೌಡ (ಮುಖ್ಯಮಂತ್ರಿಗಳು): ಇದು ಒಂದು ಗಂಭೀರವಾದ ಸಮಸ್ಯೆ. ಇದನ್ನು ತುಂಬಾ ದಿನಗಳಿಂದ ಎದುರಿಸುತ್ತಿದ್ದೇವೆ. ಇದಕ್ಕಾಗಿ ಈಗಾಗಲೇ ಒಂದು ಹೊಸ ಮರಳು ನೀತಿಯನ್ನು ತರಬೇಕು ಎಂದು ಹೇಳುವ ಆಲೋಚನೆಯನ್ನು ಕೂಡ ಮಾಡಿದ್ದೇವೆ. ಅದರ ಬಗ್ಗೆ ಒಂದಷ್ಟು ಮಾಡಿದ್ದೇವೆ. ತಾತ್ಕಾಲಿಕವಾಗಿ ಎಲ್ಲಾ ಕಡೆಗಳಿಂದಲೂ ಸಹ ಈ ಪ್ರಶ್ನೆ ಉದ್ಭವವಾದ ಕಾರಣ ತಕ್ಷಣ ನಮ್ಮ ಎಲ್ಲಾ ಪಾರ್ಟಿಯ ಪ್ರಮುಖರನ್ನು ಕರೆದು, ಮಾನ್ಯ ಉದಾಸಿಯವರು PWD ಮಂತ್ರಿಯವರು, ಅವರು ತಕ್ಷಣ ಒಂದು ಮೀಟಿಂಗ್ ಕರೆಯುತ್ತಾರೆ. ಆ ಮೀಟಿಂಗ್‌ನಲ್ಲಿ ಒಂದಷ್ಟು ವಿಮರ್ಶೆಗಳನ್ನು ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ ಎರಡನೆಯದಾಗಿ ಇನ್ನೊಂದು ವಿಚಾರ. ಆಯಾಯ ಜಿಲ್ಲಾದಿಕಾರಿಗಳ ನೇತೃತ್ವದಲ್ಲಿ ಪ್ರತಿ ಜಿಲ್ಲೆಯಲ್ಲಿ ಅಲ್ಲಿರುವಂತಹ ಎಲ್ಲಾ ಶಾಸಕರುಗಳನ್ನು ಅಲ್ಲಿರುವಂತಹ ಮಂತ್ರಿಗಳನ್ನು ಕರೆದು ಜಿಲ್ಲಾ ಮಟ್ಟದಲ್ಲಿ ಒಂದು

ಸಭೆ ನಡೆಸಿ ಅದಕ್ಕೆ ಪರಿಹಾರ ಜಿಲ್ಲಾ ಮಟ್ಟದಲ್ಲಿ ಮಾಡುವಂತಹ ಕೆಲಸ ಕಾರ್ಯಗಳನ್ನು ಮಾಡುತ್ತೇವೆ.

ಅಧ್ಯಕ್ಷರು: ಉತ್ತರ ಹೇಳಿದ್ದಾರೆ, ಇನ್ನು ಈ ವಿಚಾರ ಬೇಡ. ಇದರ ಬಗ್ಗೆ ಇಲ್ಲಿ ವಿಚಾರ ಮುಕ್ತಾಯವಾಗಿದೆ. ಮಾನ್ಯ ರೇವಣ್ಣನವರು.

ಶ್ರೀ ಹೆಚ್. ಡಿ. ರೇವಣ್ಣ: ಮಾನ್ಯ ಸಭಾಧ್ಯಕ್ಷರೆ,

ಅಧ್ಯಕ್ಷರು: ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರಲ್ಲ, ಈಗಾಗಲೇ ಬಿಲ್ ಬರುತ್ತಿದೆ.

ಶ್ರೀ ಹೆಚ್. ಸಿ. ಬಾಲಕೃಷ್ಣ: ಜಲ್ಲಿ ಬಗ್ಗೆನೂ ಕೂಡ ತೀರ್ಮಾನ ತೆಗೆದುಕೊಳ್ಳಬೇಕು.

ಅಧ್ಯಕ್ಷರು: ಬಿಲ್ ಬರುತ್ತಿದೆ ಎಂದು ಹೇಳಿದ್ದಾರೆ

(ಗೊಂದಲ)

ಅಧ್ಯಕ್ಷರು: ಎಲ್ಲಾ ಸೇರಿ ಬಿಲ್ ಬರುತ್ತಿದೆ, ಚರ್ಚೆ ಮಾಡೋಣ

ಶ್ರೀ ಶಿವರಾಜ್ ತಂಗಡಗಿ: ಹೈಕೋರ್ಟಿಗೆ ತಮಿಳುನಾಡು ರೀತಿ ಮಾಡುತ್ತೇವೆಂದು ಮನವಿ ಸಲ್ಲಿಸಿದ್ದಾರೆ.

ಅಧ್ಯಕ್ಷರು: ನಾನು ಮಾನ್ಯ ರೇವಣ್ಣನವರನ್ನು ಕರೆದಿದ್ದೇನೆ. Please ಕುಳಿತುಕೊಳ್ಳಿ. ಪದವಿ ಪೂರ್ವ ಶಿಕ್ಷಕರ ವಿಚಾರ.

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಅಧ್ಯಕ್ಷರೆ, ಮೊನ್ನೆ ಸದನದಲ್ಲಿ ನೀವು ಒಂದು ತೀರ್ಮಾನ ತೆಗೆದುಕೊಂಡಿದ್ದೀರಿ.

ಶ್ರೀ ಶಿವರಾಜ್ ತಂಗಡಗಿ: ಹೈಕೋರ್ಟಿಗೆ ಸಲ್ಲಿಸಿದ್ದಾರೆ ಅವರು

ಆ) ವಿಷಯ: ಶಾಸಕರಿಗೆ ಅಪಮಾನ ಮಾಡಿರುವ ಅಧಿಕಾರಿಗಳ ಬಗ್ಗೆ ಕ್ರಮ ಕೈಗೊಳ್ಳದ ಬಗ್ಗೆ

ಶ್ರೀ ಕೆ. ಎಂ. ಶಿವಲಿಂಗೇಗೌಡ: ಮಾನ್ಯ ಕಾನೂನು ಸಚಿವರು ನನಗೆ ಅವಮಾನ ಮಾಡಿದಂತಹ ಅಧಿಕಾರಿಯನ್ನು ಅಮಾನತ್ತುಗೊಳಿಸುತ್ತೇವೆಂದು ಹೇಳಿದರು. ಆದೇಶ ಬಂತು. ಆದರೆ ಇವತ್ತಿನವರೆಗೆ ಆ ಆದೇಶ ಇಂಪ್ಲಿಮೆಂಟ್ ಆಗಿಲ್ಲ.

ಶ್ರೀ ಹೆಚ್. ಡಿ. ರೇವಣ್ಣ: ಜಿಲ್ಲಾಧಿಕಾರಿಗಳು ನಾಲ್ಕು ದಿವಸವಾದರೂ ಆದೇಶವನ್ನು ಇಂಪ್ಲಿಮೆಂಟ್ ಮಾಡದೇ ಹಾಗೆಯೇ ಇಟ್ಟುಕೊಂಡಿದ್ದಾರೆ.